**(ದಿನಾಂಕ 18.06.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಡಿಕ್ರಿದಾರರರ ಪರ ಶ್ರೀ ಬಿ ಆರ್ ಜಿ ವಕೀಲರಿಂದಃ-**

ಈ ಅಮಲ್ಜಾರಿ ಅರ್ಜಿಯನ್ನು ಸಿದ್ದಲಿಂಗಪ್ಪ ಏಕೆ ಹೂಡಿರುತ್ತಾರೆ ಎಂದರೆ ಗೊತ್ತಿಲ್ಲಾ. ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿ ಯಾವ ಯಾವ ಪ್ರಕರಣಗಳು ಇವೆ ಅವುಗಳ ಕೇಸ್ ನಂಬರ ಮತ್ತು ಯಾವ ನ್ಯಾಯಾಲಯದಲ್ಲಿ ಇವೆ ಅಂತಾ ಹೇಳಲು ಬರುತ್ತದೆ. ನಾನು ಹೂಡಿದ ದಾವಾ ಸಂಖ್ಯೆ ಗೊತ್ತಿಲ್ಲಾ. ದಿವಾಣಿ ನ್ಯಾಯಾಲಯದಲ್ಲಿ ಸಲ್ಲಿಸಿದ ದಾವಾ ಸಂಖ್ಯೆ ನನಗೆ ಗೊತ್ತಿಲ್ಲಾ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ತೋರಿಸಿರುವ ದಾವಾ ಸಂಖ್ಯೆ ನಾನು ಹೇಳಿ ಬರೆಸಿಲ್ಲಾ ಎಂದರೆ ಸರಿಯಲ್ಲ. 16.10.1994 ರಂದು ನನ್ನ ತಂದೆ ಮೃತ ಹೊಂದಿರುತ್ತಾರೆ ಎಂದರೆ ನನ್ನ ತಂದೆ 11.11.1993 ರಲ್ಲಿ ತೀರಿಕೊಂಡಿರುತ್ತಾರೆ . ನನ್ನ ತಾಯಿ ದಿನಾಂಕ 16.02.1995 ರಂದು ಮೃತ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ಹೆಸರಿನಲ್ಲಿ ಇದ್ದಂತಹ ಆಸ್ತಿಗಳನ್ನು ಖಾತಾ ಬದಲಾವಣೆ ಮಾಡಲು 23.05.1995 ರಲ್ಲಿ ಅಫಿಡವಿಟ್ ಸಲ್ಲಿಸಿ ಪೋತಿ ಬದಲಾವಣೆ ಮಾಡುವಂತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಮಲ್ಜಾರಿ ಅರ್ಜಿಯಲ್ಲಿ ತೋರಿಸಿರುವ ಸರ್ವೆ ನಂಬರ 174 ಬಿ 1 ಎಕರೆ 11 ಸೆಂಟ್ಸ್ ಇರುತ್ತದೆ. ಸದರಿ ಆಸ್ತಿ ನಮ್ಮ ತಂದೆಗೆ ಹೇಗೆ ಬಂತು ಎಂದರೆ ನನ್ನ ತಂದೆ ಖರೀದಿ ಮಾಡಿರುತ್ತಾರೆ. ಹೊಸಪೇಟೆ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲಾ. ಸರ್ವೆ ನಂಬರ 174 ಬಿ 1 ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಮ್ಮ ತಂದೆ ಹೆಸರಿನಲ್ಲಿ ಸರ್ವೆ ನಂಬರ 174 ಬಿ 1 ರ ಹಳೇ ದಾಖಲೆಗಳು ಇದ್ದವು ಎಂದರೆ ಸರಿ. ನಮ್ಮ

ಅಮಲ್ಜಾರಿ ಸಂಖ್ಯೆ 27/2018

ಪಿ ಡಬ್ಲ್ಯೂ-1

ತಂದೆಗೆ ಮಾತ್ರ ಸರ್ವೆ ನಂಬರ 174 ಬಿ 1 ಹಕ್ಕು ಹೊಂದಿದ್ದರು ಎಂದರೆ ಸರಿಯಲ್ಲ. ಸರ್ವೆ ನಂಬರ 174 ಬಿ 1 ನಮ್ಮ ತಂದೆಗೆ ಮಾತ್ರ ಹಕ್ಕು ಇತ್ತು ಉಳಿದವರಿಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಹೆಬ್ಬೆಟ್ಟು ಗುರುತು ಹಾಕುತ್ತಿದ್ದರು. ನಮ್ಮ ತಂದೆ 10.10.1994 ರಂದು ದಾದೇಸಾಬ್ ಗೆ ವಿಲ್ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ 174 ಬಿ 1 ಪೂರ್ಣ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ತಂದೆ ವಿಲ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ವಿಲ್ ಆಧಾರದ ಮೇಲೆ ದಾದೇ ಸಾಬ್ ನ ಹೆಸರಿನಲ್ಲಿ ಪುರಸಭೆಯಲ್ಲಿ ದಾಖಲೆಗಳು ಆಗಿವೆ ಎಂದರೆ ಸರಿಯಲ್ಲ. ದಾದೇ ಸಾಬ್ ತೆರಿಗೆ ಪಾವತಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಕರಪಾವತಿ ರಸೀದಿಗಳನ್ನು ದಾದಾಸಾಬ್ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ 174 ಬಿ 1 ನನ್ನ ತಂದೆ ಆಸ್ತಿ ಅಂತಾ ನಾನು ಹಕ್ಕು ಕೇಳುತ್ತಿದ್ದೇನೆ. ಯಾವ ದಾಖಲೆ ಅಂತಾ ಹೇಳಲು ಆಗುವುದಿಲ್ಲಾ. ನಿ ಪಿ 11 ಸ್ವಾಧೀನ ರಹಿತ ಕ್ರಯ ಪತ್ರ ಎಂದರೆ ಸರಿ. ನಿ ಪಿ 11 ರ ಪ್ರಕಾರ ನಾನು ಅಣ್ಣನ ವಿರುದ್ಧ ಕ್ರಮಬದ್ಧವಾದ ಕ್ರಯಪತ್ರ ಬರೆದುಕೊಡುವಂತೆ ಕ್ರಮ ತೆಗೆದುಕೊಂಡಿಲ್ಲಾ. ನಿ ಪಿ 11 ರಲ್ಲಿ ತೋರಿಸಿದ ಚೆಕ್ ಬಂದಿ ಬೇರೆ, ಮತ್ತು ದಾವಾ ಆಸ್ತಿ ಬೇರೆ ಎಂದರೆ ಸರಿಯಲ್ಲ. ಸಿದ್ದಲಿಂಗಪ್ಪ ಹಣ ವಸೂಲಾತಿಗಾಗಿ ಮಾತ್ರ ಅಮಲ್ಜಾರಿ ಸಲ್ಲಿಸಿದ್ದು ಖರೀದಿ ಪತ್ರ ನೋಂದಣಿಗಾಗಿ ಪರಿಹಾರ ಕೇಳಿಲ್ಲಾ ಎಂದರೆ ಗೊತ್ತಿಲ್ಲಾ. ಈ ಪ್ರಕರಣದಲ್ಲಿ ಅವಶ್ಯಕ ಪಕ್ಷಗಾರನಲ್ಲಾ ಎಂದರೆ ಸರಿಯಲ್ಲ. ಓ ಎಸ್ ಸಂಖ್ಯೆ 119/2016 ರಲ್ಲಿ ಏನು ಪರಿಹಾರ ಕೋರಿ ಹೂಡಿದ್ದೆ ಎಂದರೆ ನೋಂದಾದ ಪತ್ರ ರದ್ದು ಪಡಿಸಲು ಪರಿಹಾರ ಕೇಳಿದ್ದೆ. ಬೇರೆ ಪರಿಹಾರ ಕೇಳಿರುವುದಿಲ್ಲಾ. ವಾದ ಪತ್ರದಲ್ಲಿ ತೋರಿಸಿರುವ ವಿಸ್ತೀರ್ಣ, ಚೆಕ್ ಬಂದಿ ಮತ್ತು ಪಾಲು ವಿಭಾಗ ಪತ್ರದಲ್ಲಿ ತೋರಿಸಿರುವ ಚೆಕ್ ಬಂದಿ ವಿಸ್ತೀರ್ಣ ಮತ್ತು ಓ ಎಸ್ ನಂಬರ

103/2016 ರಲ್ಲಿ ತೋರಿಸಿರುವ ಚೆಕ್ ಬಂದಿ ಮತ್ತು ವಿಸ್ತೀರ್ಣ ಬೇರೆ ಬೇರೆ ಎಂದರೆ ಸರಿಯಲ್ಲ. ನಾನೇ ಹಾಜರುಪಡಿಸಿರುವ ದಾಖಲೆಗಳಲ್ಲಿ ಬೇರೆ ಬೇರೆ ಚೆಕ್ ಬಂದಿ ಇದ್ದರೂ ಸಹ ಒಂದೇ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ ನಂಬರ 119/2016 ವಾದ ಪತ್ರದಲ್ಲಿ ತೋರಿಸಿರುವ ಆಸ್ತಿ ಡೋರ್ ನಂಬರ ತೋರಿಸಲ್ಲಾ ಸರ್ವೆ ನಂಬರ ತೋರಿಸಿರುತ್ತೇನೆ. ದಾವಾ ಆಸ್ತಿ ಮೌಲ್ಯ 10 ಲಕ್ಷ. ವಾದ ಪತ್ರದಲ್ಲಿ 10 ಲಕ್ಷ ನ್ಯಾಯಾಲಯದ ಶುಲ್ಕ ಪಾವತಿಸಿಲ್ಲಾ. 10 ಸೆಂಟ್ಸ್ ನಮ್ಮ ಅಣ್ಣನಿಗೆ ಯಾವ ಆಧಾರದಲ್ಲಿ ಬಂದಿದೆ ಎಂದರೆ ನಮ್ಮ ಅಣ್ಣನಿಗೆ 10 ಸೆಂಟ್ಸ್ ಬಂದಿಲ್ಲಾ. ಪಾಲು ಪಟ್ಟಿ ಆಧಾರದ ಮೇಲೆ ನಾನು ಹಕ್ಕು ಕೇಳುತ್ತಿದ್ದೇನೆ. ನಾನು ಹಕ್ಕು ಘೋಷಣ ಪರಿಹಾರ ಕೇಳಿ ದಾವಾ ಹೂಡಿದ್ದೆ ಎಂದರೆ ಸರಿ. ನಿ ಪಿ 11 ರಲ್ಲಿ ಸರ್ವೆ ನಂಬರ, ವಿಸ್ತೀರ್ಣ ತೋರಿಸಿದ್ದೇವೋ ಡೋರ್ ನಂಬರ ತೋರಿಸಿದ್ದೇವೋ ಎಂದರೆ ಡೋರ್ ನಂಬರ ತೋರಿಸಿಲ್ಲಾ. ವಿಸ್ತೀರ್ಣ 1 ಎಕರೆ 14 ಸಂಟ್ಸ್ ಅಂತಾ ತೋರಿಸಿದ್ದೇನೆ. ಚೆಕ್ ಬಂದಿಯನ್ನು ಪೂರ್ವಕ್ಕೆ ಕಾಲೇಜ್ ಪಶ್ಚಿಮಕ್ಕೆ ಹೊಸಪೇಟೆ ರಸ್ತೆ ಉತ್ತರಕ್ಕೆ ಜಾಲೀ ಬಾಷ ರವರ ಕಣ, ದಕ್ಷಿಣಕ್ಕೆ ಬಿ ಡಿ ಓ ಕಚೇರಿ ಅಂತಾ ತೋರಿಸಿರುತ್ತೇನೆ. ದಾಖಲೆಗಳಿಗೂ ಈಗ ನಾನು ಹೇಳುತ್ತಿರುವ ಚೆಕ್ ಬಂದಿ ತಾಳೆ ಆಗುವುದಿಲ್ಲಾ ಎಂದರೆ ಸರಿಯಲ್ಲ. ಪಾಲು ವಿಭಾಗ ಕೋರಿ ದಾದಾ ಸಾಬ್ ತನ್ನ ವಾದ ಪತ್ರದಲ್ಲಾಗಲಿ ಅಥವಾ ನಾನು ಸಲ್ಲಿಸಿದ ಪ್ರತಿವಾದ ಪತ್ರದಲ್ಲಾಗಲಿ ಈ ಅರ್ಜಿಯಲ್ಲಿ ಇರುವ ಆಸ್ತಿಯ ಬಗ್ಗೆ ತಿಳಿಸಿಲ್ಲಾ ಎಂದರೆ ಸರಿಯಲ್ಲ. ನಾನು ವಿಚಾರ ತಿಳಿಸಿಲ್ಲಾದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ ದೃಢಿಕರಣ ಪತ್ರವನ್ನು ಸಬ್ ರಜಿಸ್ಟ್ರರವರಿಂದ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸದಿದ್ದರೂ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 1 ಪಾಲು ವಿಭಾಗ ಪತ್ರದಲ್ಲಿ ನಮ್ಮ ತಂದೆಯ ಮೂರು ಜನ ಅಣ್ಣ ತಮ್ಮಂದಿರು ಪಾಲು ವಿಭಾಗ ಮಾಡಿಕೊಂಡಿರುವ ಬಗ್ಗೆ ತೋರಿಸಿದ್ದು ಕೊಟ್ಟೂರು ಇಮಮ್ ಸಾಬ್ ಮಕ್ಕಳು ಅಂದರೆ ನನ್ನ ಸಹೋದರಿಯರ ಸಹಿ ಪಡೆದುಕೊಂಡಿಲ್ಲ ಎಂದರೆ ಸರಿ. ದೊಡ್ಡ ರಾಜಾ ಸಾಬ್ ನ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಮತ್ತು ಅವರ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಕೆ ಸಣ್ಣ ರಾಜಾ ಸಾಬ್ ನ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಮತ್ತು ಅವರ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಪಾಲು ವಿಭಾಗ ಪತ್ರದಲ್ಲಿ ಕೇವಲ ಒಂದೇ ಸರ್ವೆ ನಂಬರ ಸ್ವತ್ತಿಗೆ ಮಾತ್ರ ಪಾಲು ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಉಳಿದ ಆಸ್ತಿಗಳು ಇರುವ ಬಗ್ಗೆ ಪಾಲು ವಿಭಾಗ ಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿ. ಪಾಲು ವಿಭಾಗ ಪತ್ರ ಕಾನೂನಾತ್ಮಕವಾಗಿ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ನಿ ಪಿ 1 ರಿಂದ ನಿ ಪಿ 21 ರ ದಾಖಲೆಗಳು ಕಾನೂನಿಗೆ ವಿರುದ್ದವಾಗಿ ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ. ನಿ ಪಿ 16 ದಿನಾಂಕ 19.08.2002 ರ ಪಾಲುಪಟ್ಟಿ ಸದರಿ ದಾಖಲೆ ಕೂಡ ನಿಮ್ಮ ಸಹೋದರಿಯರ ಹೆಸರು ಆಗಲಿ ಸಹಿ ಆಗಲಿ ಇಲ್ಲ ಎಂದರೆ ಸರಿಯಲ್ಲ. ಪಾಲು ಪಟ್ಟಿ ಕಾನೂನ್ಮಾತಕವಾಗಿ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ದಾದಾ ಸಾಬ್ ಗೆ 5 ಜನ ಹೆಣ್ಣು ಮಕ್ಕಳು. ರಾಜಮಾಬೀ ಯ ಗಂಡ ಹುಸೇನ್ ಬಾಷಾ ಎಂದರೆ ಗೊತ್ತಿಲ್ಲ. ಆಸ್ಮಾಳನ್ನು ಹೊಸಪೇಟೆ ಲಾರಿ ಚಾಲಕನಿಗೆ ವಿವಾಹ ಮಾಡಲಾಗಿದೆ ಎಂದರೆ ಗೊತ್ತಿಲ್ಲ. 2015 ಕ್ಕಿಂತ ಪೂರ್ವ ದಲ್ಲಿ ರಾಜಮಾಬೀಯನ್ನು ವಿವಾಹ ಮಾಡಿಕೊಟ್ಟಿದ್ದರು ಎಂದರೆ ಇರಬಹುದು. ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ತಿಂಗಳ ನಂತರ ಅಕೆ ಗಂಡನನ್ನು ಬಿಟ್ಟು ತವರು ಮನೆಗೆ ಬಂದಳು ಎಂದರೆ ಸರಿ.

**(ಡಿಕಿರದಾರರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.